**Contributed By Sri Ramanatha Bangalore**

ಶ್ರೀ ಮ ದ್ ವಾ ದಿ ರಾ ಜ ಗು ರು ಭ್ಯೋ ನ ಮಃ



ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟ ಫಲಪ್ರದಾ ।
ತಥಾ ಕಲೌ ವಾದಿರಾಜ ಶ್ರೀಪಾದೋಽಭೀಽಷ್ಟದಃ ಸತಾಂ ॥

ಕಾಮಧೇನುವು ಹಿಂದೆ ಎಲ್ಲಾ ಅಭೀಷ್ಟಗಳನ್ನು ಕೊಡುತ್ತಿತ್ತು. ಅದರಂತೆ ಈ ಕಲಿಕಾಲದಲ್ಲಿ ಸಜ್ಜನರಿಗೆ ಅಭೀಷ್ಟಗಳನ್ನು ನೀಡುತ್ತಿರುವವರು ವಾದಿರಾಜಶ್ರೀಪಾದರು.

ತಪೋ ವಿದ್ಯಾ ವಿರಕ್ತ್ಯಾದಿ ಸದ್ಗುಣೌಘಾಕರಾನಹಂ ।
ವಾದಿರಾಜ ಗುರೂನ್ ವಂದೇ ಹಯಗ್ರೀವ ದಯಾಶ್ರಯಾನ್ ॥

ತಪಸ್ಸು, ವಿದ್ಯೆ, ವಿರಕ್ತಿ, ಮೊದಲಾದ ಸದ್ಗುಣಗಳ ಖನಿಯೇ ವಾದಿರಾಜರು. ಹಯಗ್ರೀವದೇವರ ದಯೆಗೆ ಪಾತ್ರರಾದ ಆ ವಾದಿರಾಜ ಗುರುಗಳಿಗೆ ನನ್ನ ವಂದನೆಗಳು.

( ಆ ರಾ ಧ ನೆ : ಫಾ ಲ್ಗು ಣ ಮಾ ಸ ಕೃ ಷ್ಣ ಪ ಕ್ಷ ತೃ ತೀ ಯ )

ಶ್ರೀ ಕ ಮ ಲಾ ಪ ತಿ ದಾ ಸ ಕೃ ತ

ಒಂದು ಕ್ಷಣದಲಿ ವಾದಿರಾಜರ
ದ್ವಂದ್ವ ಪದವನು ಭಜಿಸುವವರಿಗೆ
ಬೆಂದು ಪೋಗ್ವುದು ಪೂರ್ವಜನ್ಮದ ದುರಿತ ಕಾನನವು । ಈ
ಮಂದಮತಿಗಳು ಬಲ್ಲರೇ ಗೋ–
ವಿಂದ ಭಕ್ತರ ಮಹಿಮೆಯನು
ಪುರಂದರಾದಿಗಳರಿವರಲ್ಲದೆ ಮಿಕ್ಕವರರಿಯಲಹುದೇ ॥

ಸಾರಕ್ರೋಡೀಕರಿಸಲನುದಿನ ।
ಸಾರೆವರ್ಣಭಿಮಾನಿ ದೀನೋ–
ದ್ಧಾರಗೋಸುಗ ಹರಿಕಥಾಮೃತಸಾರವನು ರಚಿಸಿ ॥
ಸ್ಥೈರ್ಯ ಮಾನಸದಿಂದ ಭಾವೀ ।
ಭಾರತೀಪತಿ ವಾದಿರಾಜರ ।
ಭೂರಿ ಕೋಶಕೆ ವೊಪ್ಪಿಸುತಲಾಪಾರಮುದ ಪಡೆದ ॥

(ಶ್ರೀ ಹರಿಕಥಾಸಾರಾಮೃತಸಾರ ಮಹಾತ್ಮೆ ಸಂಧಿ)

ರಾ ಗ – ಸು ರ ಟಿ : ತಾ ಳ – ಆ ದಿ ತಾ ಳ

ವಾದಿರಾಜ ಮುನಿಪ । ಹಯಮುಖ ।
ಪಾದ ಕಮಲ ಮಧುಪ । ಪ ।

ನೀ ದಯದಲಿ ತವ ಪಾದ ಧ್ಯಾನವನು
ಆದರದಲಿ ಕೊಟ್ಟಾದರಿಸೆನ್ನನು । ಅ ಪ ।

ಮೂಷಕ ಬಿಲದಿಂದ ಉದರ
ಪೋಷಕೆ ಬರಲಂದು
ವಾಸುಕಿ ಭಯದಿ ನಿನ್ನಾಸನದಿ ಬರೆ

ಕ್ಲೇಶ ಕಳೆದು ಸಂತೋಷವ ಗೈಸಿದೆ ।೧।

ಮುಂದೆ ಭೂತವರನ ಪ್ರೇರಿಸಿ
ಹಿಂದೆ ಒಬ್ಬ ನರನಾ
ನಿಂದರಿಸಿದೆ ಆನಂದದಿಂದ ಜನ
ವೃಂದ ನೋಡುತಿರೆ ಅಂದಣ ನಡಿಸಿದ್ಯೊ ।೨।

ಕ್ಷಿತಿಯೊಳು ಸತಿ ತನ್ನಾ ವಲ್ಲಭ
ಮೃತಿಯೈದಿರೆ ಮುನ್ನಾ
ಅತಿ ಶೋಕದಿ ಬಂದು ನುತಿಸಲು ಆ
ಪತಿಯನು ಬದುಕಿಸಿ ಹಿತದಿ ರಕ್ಷಿಸಿದೆ ।೩।

ನರಪತಿ ವ್ಯಾಧಿಯಲಿ ಬಳಲ್ವದ
ತ್ವರಿತದಿ ನೀ ಕೇಳಿ
ಹರುಷದಿ ವ್ಯಾಧಿಯ ಪರಿಹರಿಸ್ಯವನಿಗೆ
ಹರುಷದಿಂದಲಭಯವ ತೋರಿದೆ ।೪।

ಶಾಸ್ತ್ರಪ್ರಸಂಗದಲಿ ನಾರಾಯಣ-
ಭೂತನ ಗೆಲಿದಲ್ಲಿ
ಖ್ಯಾತಿಯಿಂದ ಬಹುಮಾತನಾಡಿ ಶ್ರೀ-
ನಾಥನ ಮಂದಿರ ಪ್ರೀತಿಲಿ ತರಿಸಿದೆ ।೫।

ತುರಗವದನ ಪಾದ ಭುಜದಲಿ
ಧರಿಸಿಕೊಂಡ ಮೋದ
ವರಕಡಲೆಯ ಮಡ್ಡಿಯನು ಕರದಿಂ
ಧರಿಸಿ ಉಣಿಸಿದೆ ಗುರುವರ ಶುಭಕರ ।೬।

ಆ ಮಹಾ ಗೋಪಾಲವಿಟ್ಠಲನ
ಪ್ರೇಮ ಪೂರ್ಣ ಪಾತ್ರ

ಧೀಮಂತರಿಗೆ ಸುಕಾಮಿತಾರ್ಥಗಳ
ನೇಮದಿಂದೀಯುವ ಪಾವನ ಚರಿತ ।೭।



ರಾ ಗ – ನಾ ಟಿ : ತಾ ಳ – ತ್ರಿ ಪು ಟ ತಾ ಳ

ಶರಣು ಶರಣು ಶರಣಯ್ಯ ಶರಣು ।ಪ।

ಶ್ರೀ ಗುರು ವಾದಿರಾಜಗೆ
ಶರಣು ಸುರಗಣ ಮಾನ್ಯಗೆ
ಶರಣು ಶರಣರ ಪೊರೆವ ಕರುಣೆಗೆ
ಶರಣು ಹರಿಗುಣಲೋಲಗೆ ।ಅ ಪ।

ಮಧ್ವಮತ ಶುಭವಾರ್ಧಿಚಂದ್ರಗೆ
ಸಿದ್ಧಸಾಧನ ಮೂರ್ತಿಗೆ
ಬದ್ಧ ಶ್ರೀಹರಿದ್ವೇಷ ಮಾಯ್ಗಳ
ಗೆದ್ದ ಹಯಮುಖ ದಾಸಗೆ ।೧।

ನಿತ್ಯ ನಿರ್ಮಲ ನಿಗಮಸ್ತೋತ್ರಗೆ
ಭೃತ್ಯ ಪಾಲಕ ಸುಗುಣ ಗಾತ್ರಗೆ
ಸತ್ಯಲೋಕ ಸುಮುಖ್ಯ ಪಾತ್ರಗೆ
ಸ್ತುತ್ಯಯತಿವರ ಸುಜನ ಮಿತ್ರಗೆ ।೨।

ಮೋದದಾಯಕ ಭೇದ ಸಾಧಕ
ಸೋದೆ ಕ್ಷೇತ್ರಾಧೀಶಗೆ
ವೇದವೇದ್ಯ ಯತೀಶ ತಾತಗೆ
ಆದಿ ಗುರುಜಗನ್ನಾಥವಿಟ್ಠಲಗೆ ।೩।



ರಾ ಗ - ಹಿ ಂ ದೂ ಸ್ಥಾ ನಿ : ತಾ ಳ - ಆ ದಿ ತಾ ಳ

ರಾಜರ ಭಾಗ್ಯವಿದು ವಾದಿರಾಜರ ಭಾಗ್ಯವಿದು ಸೋದೆ
ರಾಜರ ಭಾಗ್ಯವಿದು ।ಪ।

ರಾಜರ ಭಾಗ್ಯವೆಂತು ವರ್ಣಿಪೆನು ನಾ
ವಾಜಿವದನನ ಸದಾ ಪೂಜಿಪ ಭಾಗ್ಯವು ।೧।

ಐದು ಪರ್ಯಾಯದಿ ಕೃಷ್ಣನ ಪೂಜೆಯ
ಸಾದರದಲಿ ರಚಿಸಿರ್ದ ವಿಭವವಿದು ।೨।

ಸುರರ ವಿಮಾನವ ತಡೆದು ನಿಲ್ಲಿಸಿದ
ಮರುತನ ಪದವ ಮುಂದೇರುವ ಭಾಗ್ಯವು ।೩।

ಬದರಿಕಾಶ್ರಮದಿಂದ ನದಿಯ ಪೆತ್ತನ ತಂದು

ಸದನದೊಳಿರಿಸಿದುದತಿ ವಿಭವ ।೪।

ಸೋದೆಯಪುರದಿ ರಾಜೇಶಹಯಾಸ್ಯನ
ಪಾದವ ಭಜಿಸುತ ನಿಂದಿಹ ಭಾಗ್ಯವು ।೫।



ರಾಗ – ಹಂಸನಂದಿನಿ : ತಾಳ – ಛಾಪು ತಾಳ

ಜನ್ಮ ಸಫಲ ಕಾಣಿರೊ
ನಮ್ಮ ಗುರು ವಾದಿರಾಜರಾಯರ ಕಂಡು ।ಪ।

ಯುಕ್ತಿಮಲ್ಲಿಕೆಯೆಂಬ ಗ್ರಂಥ ಮಾಡಿಹರು
ಮತ್ತೆ ಮುತ್ತಿನ ಸಿಂಹಾಸನವನೇರಿಹರು
ಮತ್ತದುರ್ವಾದೀಭಗಳಿಗೆ ಮೃಗೇಂದ್ರರು
ಸೂತ್ರನಾಮದಿ ಮುಂದೆ ಮೆರೆವರು ।೧।

ವ್ಯಾಸ ಕೂಟಗಳಲ್ಲಿ ಶ್ರೇಷ್ಠರಾಗಿಹರು
ದಾಸ ಕೂಟಗಳಲ್ಲಿ ರತ್ನದಂತಿಹರು
ಭೂಸುರ ಕಾಯದಿ ನೂರಿಪ್ಪತ್ತು
ವರ್ಷ ಧರೆಯೊಳಗೆ ಮೆರೆದವರು ।೨।

ಮೂಜಗದೊಳಗಿಂಥ ಗುರುಗಳೆಲ್ಲಿಹರು
ಕಂಜಸುತನ ಪದವೇರುವರು
ರಾಜೇಶಹಯಮುಖನ ಕಿಂಕರಾಗ್ರಣಿಗಳು

ರಾಜಿಪ ಶ್ರೀಸೋದೆಪುರದಲಿಹರು ।೩।



ರಾ ಗ – ಭೈ ರ ವಿ : ತಾ ಳ – ಅ ಟ ತಾ ಳ

ಕಂಡೆ ಕಂಡೆ ರಾಜರ ಕಂಡೆ ಕಂಡೆ ।ಪ।


ಕಂಡೆ ಕಂಡೆನು ಕರುಣ ನಿಧಿಯನು
ಕರಗಳಂಜಲಿ ಮಾಡಿ ಮುಗಿವೆನು
ಲಂಡೆ ಮಾಯಿಗಳ ಗುಂಡಿ ಒಡೆಯಲು–
ದ್ದಂಡ ಮಾರುತಿ ಪದಕೆ ಬರುವನ ।ಅ ಪ।

ಪಂಚ ವೃಂದಾವನದಿ ಮೆರೆಯುವ
ಪಂಚ ಬಾಣನ ಪಿತನ ಸ್ಮರಿಸುವ
ಪಂಚ ನಂದನ ಮುಂದೆ ಆಗುತ
ಮಿಂಚಿನಂದದಿ ಪೊಳೆವ ಮಹಿಮನ ।೧।

ಪಂಕ ಪಾತಕ ಕಳೆವ ದೇವನ
ಪಂಕಜಾರಿ ನಿಭೇಂದುವಕ್ತ್ರನ । ಆ
ತಂಕವಿಲ್ಲದೆ ಭಜಿಪ ಸುಜನರ
ಶಂಕೆ ಬಿಡಿಸುವ ಶಂಕರೇಶನ ।೨।

ಭಜಿಸುವವರಿಗೆ ಭಾಗ್ಯ ಕೊಡುವನ
ಋಜುಗಣೇಶಾಮರೇಂದ್ರ ವಂದಿತ
ನಿಜಪುರಂದರವಿಟ್ಠಲೇಶನ

ಶ್ರೀ ವ್ಯಾ ಸ ರಾ ಜ ಗು ರು ಭ್ಯೋ ನ ಮಃ



ಅರ್ಥಿಕಲ್ಪಿತಕಲ್ಪೋಯಂ ಪ್ರತ್ಯರ್ಥಿಗಜಕೇಸರೀ ।
ವ್ಯಾಸತೀರ್ಥಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

ಬೇಡುವವರಿಗೆ ಕಲ್ಪವೃಕ್ಷದಂತಿರುವ, ಪ್ರತಿವಾದಿಗಳೆಂಬ ಆನೆಗಳಿಗೆ ಸಿಂಹದಂತಿರುವ ವ್ಯಾಸತೀರ್ಥರು ನನ್ನ ಅಭೀಷ್ಟಗಳನ್ನು ಪೂರೈಸಲಿ.

( ಆ ರಾ ಧ ನೆ : ಫಾ ಲ್ಗು ಣ ಮಾ ಸ ಕೃ ಷ್ಣ ಪ ಕ್ಷ ಚ ತು ರ್ಥಿ )



ರಾ ಗ – ಪೂ ರ್ವಿ : ತಾ ಳ – ಆ ದಿ ತಾ ಳ

ಇದಿರದಾವನು ನಿನಗೀ ಧರೆಯೊಳು
ಪದುಮನಾಭನ ದಾಸ ಪರಮೋಲ್ಲಾಸ ।ಪ।

ವಾದಿತಿಮಿರ ಮಾರ್ತಾಂಡನೆಂದೆನಿಸಿದೆ
ವಾದಿಶರಭ ಭೇರುಂಡ ವ್ಯಾಸರಾಯ ।೧।

ಯತಿಗಳೊಳು ನಿನ್ನಂದದವರುಗಳ
ಪ್ರತಿಗಾಣೆ ಈ ಕ್ಷಿತಿಯೊಳು ಯತಿರಾಯ ।೨।

ಹಮ್ಮನಳಿದು ಶ್ರೀಪತಿ ರಂಗವಿಟ್ಠಲನ್ನ
ಸುಮ್ಮಾನದಿಂ ಸೇವಿಪ ವ್ಯಾಸಮುನಿರಾಯ ।೩।

ರಾಗ – ಕಾಂಬೋದಿ : ತಾಳ – ಆದಿತಾಳ

ಯೋಗಿ ವ್ಯಾಸರಾಯರೆಂಬ ವಿಚಿತ್ರ ಮೇಘ
ಬೇಗ ವಿಷ್ಣುಪದವ ತೋರಿಸುತ್ತ ಬಂತಿದಿಕೊ ।ಪ।

ಮಾಯಿಮತವೆಂಬ ತಾರಾಮಂಡಲವ ಮುಸುಕುತ್ತ
ವಾಯುಗತಿಯಂತೆ ಗಮಿಸುತ್ತಲಿ
ಹೇಯ ಕಾಮಾದಿಗಳೆಂಬ ರಜವನಡಗಿಸುತ್ತ
ನಾಯಕನುಪೇಂದ್ರನಾಜ್ಞೆಯ ಪಡೆದು ।೧।

ಅಂಗಜನಯ್ಯನೇ ಪರನೆಂದು ಘುಡುಘುಡಿಸುತ್ತ
ಕಂಗಳೆಂಬ ಮಿಂಚನೆ ನೆರಹಿ ಲೋಕದಿ
ಹಿಂಗದೆ ಪರಿವ ಅಜ್ಞಾನವೆಂಬ ಕತ್ತಲೆಯ
ಭಂಗಿಸಿ ಸುರಪಥವ ತೋರಿಸುತ್ತ ।೨।

ಸಿರಿಯರಸನ ಸಮ್ಯಗ್ ಜ್ಞಾನವೆಂಬ ಪೈರಿಗೆ
ಬೇರು ಬಿಡೆ ಹರಿಕಥೆಯೆಂಬ ಮಳೆಗರೆದು

ನೆರಶಿಷ್ಯಮನವೆಂಬ ಕೆರೆಯ ತುಂಬಿಸಿ ಕರಗಳೆಂಬ
ಕೋಡಿ ಹರಿಸುತ ವಿಜಯೀಂದ್ರನಗುರು ।೩।

Sri Krishnarpanamasthu